# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | **765** |
| 2 | ಸದಸ್ಯರ ಹೆಸರು | ಶ್ರೀ ಎಂ.ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸಬೇಕಾದ ದಿನಾಂಕ | 22.02.2023 |
| 4 | ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕರ್ನಾಟಕ ಭೂಮಾಪನ ಕಂದಾಯ ವ್ಯವಸ್ಥೆ ಭೂಮಾಪನ ಇಲಾಖೆ ಯಲ್ಲಿ ಸುಮಾರು 3000 ಭೂಮಾಪಕ ಮತ್ತು ಇನ್ನಿತರೆ ಹುದ್ದೆಗಳನ್ನು ಭರ್ತಿಗೊಳಿಸಲು 2021ನೇ ಸಾಲಿನಲ್ಲಿ ಅರ್ಜಿ ಗಳನ್ನು ಆಹ್ವಾನಿಸಲಾಗಿದ್ದು, ನೇಮಕಾತಿ ಪ್ರಕ್ರಿಯೆಯು ಪೂರ್ಣಗೊಂಡಿದೆಯೇ ಮತ್ತು ಈ ನೇಮಕಾತಿ ಅಡಿಯಲ್ಲಿ ಎಷ್ಟು ಹುದ್ದೆಗಳನ್ನು ಭರ್ತಿ ಮಾಡಲಾಗಿದೆ; | ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂಮಾಪನ ಇಲಾಖೆಯಲ್ಲಿ 3000 ಪರವಾನಗಿ ಭೂಮಾಪಕರ ಆಯ್ಕೆಗಾಗಿ ಅಧಿಸೂಚನೆಯನ್ನು ಹೊರಡಿಸಲಾಗಿತ್ತು. ಮೊದಲನೇ ಹಾಗೂ ಎರಡನೆಯ ತಂಡದಲ್ಲಿ ಆಯ್ಕೆಯಾದ 1628 ಅಭ್ಯರ್ಥಿಗಳಿಗೆ 3 ತಿಂಗಳ ವೃತ್ತಿ ಬುನಾದಿ ತರಬೇತಿಯನ್ನು ದಿನಾಂಕ: 05.09.2022 ರಿಂದ ನೀಡಲಾಗಿದೆ. ವೃತ್ತಿ ಬುನಾದಿ ತರಬೇತಿಯ ಅಂತಿಮ ಪರೀಕ್ಷೆಯಲ್ಲಿ ಉತ್ತೀರ್ಣರಾದ 870 ಅಭ್ಯರ್ಥಿಗಳಿಗೆ ಪರವಾನಗಿಯನ್ನು ವಿತರಿಸಲಾಗಿದೆ. ಅನುತ್ತೀರ್ಣರಾದ 754 ಜನ ಅಭ್ಯರ್ಥಿಗಳಿಗೆ 15 ದಿನಗಳ ತರಬೇತಿಯನ್ನು ನೀಡಲಾಗುತ್ತಿದೆ. ನಂತರ 3 ನೇ ತಂಡದಲ್ಲಿ ಆಯ್ಕೆಯಾದ 307 ಅಭ್ಯರ್ಥಿಗಳಿಗೆ ದಿನಾಂಕ: 14.01.2023 ರಿಂದ ತರಬೇತಿಯನ್ನು ನೀಡಲಾಗುತ್ತಿದೆ. ಸದರಿ ಪರವಾನಗಿ ಭೂಮಾಪಕರ ಆಯ್ಕೆ ಪ್ರಕ್ರಿಯೆಯು ಇನ್ನೂ ಚಾಲನೆಯಲ್ಲಿದೆ. |
| ಆ) | ರಾಜ್ಯದ ಉಪ ನೋಂದಣಾಧಿ ಕಾರಿಗಳ ಕಛೇರಿಯಲ್ಲಿ ಆಸ್ತಿ ನೋಂದಣಿ ಸಂದರ್ಭದಲ್ಲಿ ಆಗಿಂದಾಗ್ಗೆ ಸರ್ವರ್ ಮತ್ತು ಅಂತರ್ಜಾಲ ವ್ಯವಸ್ಥೆಯು ಸ್ಥಗಿತಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ಕೈಗೊಳ್ಳಲಾದ ಕ್ರಮವೇನು? | ರಾಜ್ಯದ ಉಪನೋಂದಣಿ ಕಛೇರಿಗಳಲ್ಲಿ ಸರ್ವರ್ ಸಮಸ್ಯೆಯಿಂದಾಗಿ ಕೆಲವೊಮ್ಮೆ ನೋಂದಣಿ ಪ್ರಕ್ರಿಯೆಯಲ್ಲಿ ವ್ಯತ್ಯಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br>1. ದಸ್ತಾವೇಜುಗಳ ನೋಂದಣಿಗೆ ಹಾಲಿ ಉಪಯೋಗಿಸ ಲಾಗುತ್ತಿರುವ "ಕಾವೇರಿ" ತಂತ್ರಾಂಶವನ್ನು 2003ರಲ್ಲಿ Visual Basic ಹಾಗೂ Windows XP Platform ಗಳಡಿ ಅಭಿವೃದ್ಧಿ ಪಡಿಸಲಾಗಿದ್ದು, ಈ ಎರಡು ತಂತ್ರಾಂಶಗಳು Outdated ಆಗಿರುತ್ತದೆ ಮತ್ತು ಕಾವೇರಿ ತಂತ್ರಾಂಶವು, ಪ್ರತಿ ನೋಂದಣಿ ಕಛೇರಿಯಲ್ಲಿ ಲೋಕಲ್ ಸರ್ವರ್‌ಗಳನ್ನು ಹೊಂದಿದ್ದು, ಈ ಸರ್ವರ್‌ಗಳನ್ನು 2013ರಲ್ಲಿ ಖರೀದಿಸಲಾಗಿರುತ್ತದೆ. ಈ ಸರ್ವರ್‌ಗಳು ಬಹಳ ಹಳೆಯದಾಗಿರುವುದರಿಂದ ಕೆಲವೊಮ್ಮೆ ತಾಂತ್ರಿಕ ಸಮಸ್ಯೆ ಉಂಟಾಗಿ ನೋಂದಣಿ ಪ್ರಕ್ರಿಯೆಗೆ ಅಡಚಣೆಯಾಗುತ್ತಿರುತ್ತದೆ. ಅಲ್ಲದೇ ಸರ್ವರ್‌ಗಳ ವಾರಂಟಿ ಅವಧಿಯು ಸಹ ಮುಗಿದಿದ್ದು, ಹಾಗೂ ಕಾರ್ಯಾವಧಿಯು ಸಹ ಪೂರ್ಣಗೊಂಡಿರುತ್ತದೆ. (End of Life). ಆದುದರಿಂದ ಈ ಸರ್ವರ್‌ಗಳು ದುರಸ್ಥಿ ಮಾಡುವ ಸ್ಥಿತಿಯಲ್ಲಿರುವುದಿಲ್ಲ.<br>2. ನೋಂದಣಿ ಮತ್ತು ಮುದ್ರಾಂಕ ಇಲಾಖೆಯ 'ಕಾವೇರಿ' ತಂತ್ರಾಂಶವನ್ನು ಕಂದಾಯ ಇಲಾಖೆಯ 'ಭೂಮಿ' ತಂತ್ರಾಂಶದೊಂದಿಗೆ, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಯ 'ಮೋಜಿಣಿ' ತಂತ್ರಾಂಶದೊಂದಿಗೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ 'ಇ-ಸ್ವತ್ತು' ತಂತ್ರಾಂಶ ದೊಂದಿಗೆ, ನಗರಾಭಿವೃದ್ಧಿ ಇಲಾಖೆಯ 'ಇ-ಆಸ್ತಿ' ಮತ್ತು 'ಯು.ಪಿ.ಓ.ಆರ್' ತಂತ್ರಾಂಶದೊಂದಿಗೆ, ಸಿಬ್ಬಂದಿ ಮತ್ತು |

| | | |
|---|---|---|
| | | ಆಡಳಿತ ಸುಧಾರಣೆ ಇಲಾಖೆಯ 'ಸಕಾಲ' ತಂತ್ರಾಂಶದೊಂದಿಗೆ ಹಾಗೂ ಇ-ಆಡಳಿತ ಇಲಾಖೆಯ 'FRUITS' ತಂತ್ರಾಂಶದೊಂದಿಗೆ ಸಂಯೋಜಿಸಲಾಗಿರುತ್ತದೆ. ಈ ರೀತಿ ವಿವಿಧ ಇಲಾಖೆಗಳೊಂದಿಗೆ ಸಂಯೋಜಿಸಲಾಗಿರುವ ತಂತ್ರಾಂಶಗಳ ಸರ್ವರ್‌ಗಳಲ್ಲಿ ಯಾವುದಾದರೂ ತಾಂತ್ರಿಕ ಸಮಸ್ಯೆ ಉಂಟಾದಲ್ಲಿ ಕಾವೇರಿ ತಂತ್ರಾಂಶದಲ್ಲಿ ನೋಂದಣಿ ಪ್ರಕ್ರಿಯೆಗೆ ಅಡಚಣೆ ಉಂಟಾಗುತ್ತದೆ.<br><br>3. ಅದಲ್ಲದೇ ಉಪನೋಂದಣಿ ಕಛೇರಿಗಳಲ್ಲಿ ಈ ಹಿಂದೆ ಅಳವಡಿಸಲಾಗಿದ್ದ ಯು.ಪಿ.ಎಸ್ ಹಾಗೂ ಬ್ಯಾಟರಿಗಳು 07 ವರ್ಷ ಹಳೆಯದಾಗಿದುದ್ದರಿಂದ ಇವುಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸದೆ ಕೆಲವೊಮ್ಮೆ ಸರ್ವರ್‌ಗಳು abrupt shutdown ಗೆ ಒಳಗಾಗಿ ಡೇಟಾಬೇಸ್‌ಕ್ರಾಶ್‌ಆಗುತ್ತಿತ್ತು. ಆದುದರಿಂದ 2021ನೇ ಸಾಲಿನಲ್ಲಿ ಎಲ್ಲಾ ನೋಂದಣಿ ಕಛೇರಿಗಳಲ್ಲಿ ಹೊಸ ಯು.ಪಿ.ಎಸ್ ಹಾಗೂ ಬ್ಯಾಟರಿಗಳನ್ನು ಅಳವಡಿಸಲಾಗಿರುತ್ತದೆ.<br><br>**<u>ಸರ್ವರ್ ಸಮಸ್ಯೆಯನ್ನು ಪರಿಹರಿಸಲು ಇಲಾಖೆಯು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.</u>**<br><br>1. ಕರ್ನಾಟಕ ಸರ್ಕಾರದ ಇ-ಆಡಳಿತ ಇಲಾಖೆಯ ಅಧೀನದಲ್ಲಿರುವ ಸೆಂಟರ್ ಫಾರ್ ಸ್ಮಾರ್ಟ್‌ಗವರ್ನೆನ್ಸ್ ಸಂಸ್ಥೆಯ ಸಹಯೋಗದೊಂದಿಗೆ "ಕಾವೇರಿ-2.0" ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದ್ದು, ಈ ವ್ಯವಸ್ಥೆಯಲ್ಲಿ ಲೋಕಲ್ ಸರ್ವರ್‌ಗಳ ಅವಶ್ಯಕತೆ ಇರುವುದಿಲ್ಲ. ಹಾಗೂ ಕೇಂದ್ರೀಕೃತ ಸರ್ವರ್‌ನ್ನು ಮಾತ್ರ ಉಪಯೋಗಿಸುವುದರಿಂದ ನೋಂದಣಿ ಕಛೇರಿಗಳಲ್ಲಿ ಸರ್ವರ್ ಸಮಸ್ಯೆಗಳು ಉದ್ಭವಿಸುವುದಿಲ್ಲ. ಈ ತಂತ್ರಾಂಶವನ್ನು ಪೈಲಟ್ ಆಧಾರದ ಮೇಲೆ ಚಿಂಚೋಳಿ ಹಾಗೂ ಬೆಳಗಾವಿ ದಕ್ಷಿಣ ಉಪನೋಂದಣಿ ಕಛೇರಿಗಳಲ್ಲಿ ಅಳವಡಿಸಲಾಗಿದ್ದು, ಮುಂದಿನ ದಿನಗಳಲ್ಲಿ ರಾಜ್ಯದ ಎಲ್ಲಾ ಉಪನೋಂದಣಿ ಕಛೇರಿಗಳಲ್ಲಿ ಅಳವಡಿಸಲಾಗುವುದು.<br><br>2. ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಎಲ್ಲಾ ಕಛೇರಿಗಳಿಗೆ ಹೊಸ ಯು.ಪಿ.ಎಸ್ ಹಾಗೂ ಬ್ಯಾಟರಿಗಳನ್ನು ಅಳವಡಿಸಲಾಗಿರುತ್ತದೆ. ಇದರಿಂದಾಗಿ ಉಪನೋಂದಣಿ ಕಛೇರಿಗಳಲ್ಲಿರುವ ಲೋಕಲ್ ಸರ್ವರ್‌ಗಳು abrupt shutdown ಗೆ ಒಳಗಾಗಿ ಡೇಟಾಬೇಸ್ ಕ್ರಾಶ್ ಆಗುತ್ತಿದ್ದುದನ್ನು ತಡೆಯಲಾಗಿರುತ್ತದೆ. ಹೊಸ ಯು.ಪಿ.ಎಸ್ ಹಾಗೂ ಬ್ಯಾಟರಿಗಳನ್ನು ಅಳವಡಿಸಿದ ನಂತರ ಉಪನೋಂದಣಿ ಕಛೇರಿಗಳಲ್ಲಿ ಸರ್ವರ್‌ಗಳ ಸಮಸ್ಯೆ ಗಣನೀಯವಾಗಿ ಕಡಿಮೆಯಾಗಿರುತ್ತದೆ.<br><br>3. ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಹಾಲಿ ಇರುವ ಹಾರ್ಡ್‌ವೇರ್‌ಗಳನ್ನು 2013ರಲ್ಲಿ ಖರೀದಿಸಲಾಗಿರುತ್ತದೆ, ಇವುಗಳ ಕಾರ್ಯಾವಧಿ ಮುಗಿದಿರುವುದರಿಂದ ಹೊಸ ಹಾರ್ಡವೇರ್‌ಗಳ ಸರಬರಾಜು ಹಾಗೂ ನಿರ್ವಹಣೆಗೆ Build Own & Operate (BOO) ಮಾದರಿಯಲ್ಲಿ ಸೇವಾ ಪೂರೈಕೆದಾರರನ್ನುಆಯ್ಕೆ ಮಾಡಲಾಗಿದ್ದು, ಎಲ್ಲಾ |

ನೋಂದಣಿ ಕಛೇರಿಗಳಿಗೆ ಹೊಸ ಹಾರ್ಡ್‌ವೇರ್‌ಗಳನ್ನು ಒದಗಿಸಲಾಗುವುದು.

4. ಕಾವೇರಿ ತಂತ್ರಾಂಶಕ್ಕೆ ಸಂಬಂಧಿಸಿದಂತೆ ಹಾಗೂ ಇಲಾಖೆಯಲ್ಲಿನ ಹಾರ್ಡ್‌ವೇರ್ ಮತ್ತು ಇತರೆ ಗಣಕೀಕರಣದ ವಿಷಯಗಳಿಗೆ ಸಂಬಂಧಿಸಿದಂತೆ ಅಗತ್ಯ ಮಾರ್ಗದರ್ಶನವನ್ನು ನೀಡಲು ಕಾವೇರಿ ಯೋಜನಾ ಉಸ್ತುವಾರಿ ಘಟಕಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ತಾಂತ್ರಿಕ ಸದಸ್ಯರನ್ನು ಮೆ:ಕೆಪಿಎಂಜಿ ಅಡ್ವೈಜರಿ ಸರ್ವೀಸಸ್ ಪ್ರೈ.ಲಿ., ಸಂಸ್ಥೆಯಿಂದ ನೇಮಕ ಮಾಡಿಕೊಳ್ಳಲಾಗಿದೆ.

5. ಇಲಾಖೆಯ ಅಧಿಕಾರಿ/ ಸಿಬ್ಬಂದಿಗಳಿಗೆ ಹಾರ್ಡ್‌ವೇರ್ ಇಂಜಿನಿಯರ್‌ಗಳಿಗೆ ಮತ್ತು ಡೇಟಾಎಂಟ್ರಿ ಆಪರೇಟರ್ ಗಳಿಗೆ ಕಾವೇರಿ ತಂತ್ರಾಂಶ ಹಾಗೂ ಗಣಕೀಕರಣಕ್ಕೆ ಸಂಬಂಧಿಸಿದ ವಿಷಯಗಳಿಗೆ ತರಬೇತಿ ನೀಡಲು ಗಣಕ ಯಂತ್ರ ತರಬೇತಿ ಕೋಶವನ್ನು ಪ್ರಾರಂಭಿಸಲಾಗಿರುತ್ತದೆ. ಇಲಾಖೆಯ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ತರಬೇತಿ ಕೋಶದಲ್ಲಿ ಸೂಕ್ತ ತರಬೇತಿಯನ್ನು ನೀಡಲಾಗುತ್ತಿದೆ.

**ಅಂತರ್ಜಾಲ ವ್ಯವಸ್ಥೆಯ ಕುರಿತು**

1. ಇ-ಆಡಳಿತ ಇಲಾಖೆಯ ಅಡಿಯಲ್ಲಿ ಬರುವ ಇ-ಆಡಳಿತ ಕೇಂದ್ರದ (ಸೆಂಟರ್ ಫಾರ್ ಇ-ಗೌರ್ನೆನ್ಸ್) ಕರ್ನಾಟಕ ರಾಜ್ಯ ವಿಸ್ತೃತ ಜಾಲ ಯೋಜನೆಯಡಿಯಲ್ಲಿ (Karnataka State Wide Area Network) (ಬಿ.ಎಸ್.ಎನ್.ಎಲ್.ನ ಹಾಗೂ ಏರ್‌ಟೆಲ್ ಸಂಸ್ಥೆಗಳ ಸಹಯೋಗದೊಂದಿಗೆ ಸರ್ಕಾರದ ವಿವಿಧ ಕಛೇರಿಗಳಿಗೆ (ಉಪನೋಂದಣಿ ಕಛೇರಿಗಳು ಒಳಗೊಂಡಂತೆ) ನೆಟ್‌ವರ್ಕ್ ಸಂಪರ್ಕವನ್ನು ಒದಗಿಸಿರುತ್ತದೆ.

2. ಹವಾಮಾನ ವೈಪರಿತ್ಯದಿಂದ ಕೆಲವೊಮ್ಮೆ ಬಿ.ಎಸ್.ಎನ್.ಎಲ್. ಸಂಪರ್ಕದಲ್ಲಿ ವ್ಯತ್ಯಯ ಉಂಟಾದಲ್ಲಿ KSWAN Network ನಲ್ಲಿ ತೊಂದರೆ ಉಂಟಾಗುತ್ತದೆ. ಆ ಸಮಯದಲ್ಲಿ ನೋಂದಣಿ ಪ್ರಕ್ರಿಯೆಗೂ ತೊಂದರೆ ಯಾಗುತ್ತದೆ. ಇದನ್ನು ಶೀಘ್ರವಾಗಿ ಇ-ಆಡಳಿತ ಕೇಂದ್ರವು ಸರಿಪಡಿಸುತ್ತಿರುತ್ತದೆ.

ನೆಟ್‌ವರ್ಕ್ ಸಂಪರ್ಕದಲ್ಲಿನ ವ್ಯತ್ಯಯಗಳನ್ನು ಕಡಿಮೆ ಮಾಡಲು ಇ-ಆಡಳಿತ ಕೇಂದ್ರವು ಬಿ.ಎಸ್.ಎನ್.ಎಲ್ ನೆಟ್‌ವರ್ಕ್ ಸಂಪರ್ಕದೊಂದಿಗೆ ಪರ್ಯಾಯವಾಗಿ ಕೆಲವು ನೋಂದಣಿ ಕಛೇರಿಗಳಿಗೆ ಏರ್‌ಟೆಲ್ ನೆಟ್‌ವರ್ಕ್ ಸಂಪರ್ಕ ವನ್ನು ಒದಗಿಸಿರುತ್ತದೆ.

**ಸಂಖ್ಯೆ: ಕಂಇ 54 ಎಸ್‌ಎಸ್‌ಸಿ 2023**

**(ಆರ್.ಅಶೋಕ)**
ಕಂದಾಯ ಸಚಿವರು